ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ದೇವರಿಂದ ವರ ಪಡೆದ ಋಷಿಗಳು ಶಾಪ ಕೊಡುವುದೇಕೆ?*



ಹೆಂಡ್ತೀರಿಲ್ದೇ ಇರೋವ್ರು ಗೋಳೇ ಅಷ್ಟು; ಸಿಕ್ಕಸಿಕ್ಕವರ ಮೇಲೆ ಹಾರಾಡ್ತಾರೆ!

ನವಿರವಿ, ಬಾಳೆಹೊನ್ನೂರು
*ಪ್ರಾಣಿ, ಪಕ್ಷಿ ಮಾಡದ ದೇವರ ಪೂಜೆ ಮನುಷ್ಯ ಏಕೆ ಮಾಡಬೇಕು?*
ರುಚಿರುಚಿಯಾದ ನೈವೇದ್ಯ, ಚರ್ಪು, ಪಂಚಾಮೃತ ಸವಿಸವಿದು ಸೇವಿಸಲು!

ವಿನೋದ್ ಕುಮಾರ್ ಎಂ, ಕುಂಪಲ
*ನಮ್ಮಲ್ಲಿ ಸತ್ಯ ಹರಿಶ್ಚಂದ್ರನಂತಹವರು ಇನ್ನೂ ಬದುಕಿ ಉಳಿದಿದ್ದಾರೆಯೇ?*
ಹ್ಞ! ಮೊಬೈಲ್ ಕೈಗೆ ಬಂದಮೇಲೆ ಕಟ್ಟಕಡೆಯ ಹರಿಶ್ಚಂದ್ರನೂ ಸತ್ತ.

ದೀಪಾ ವಿ. ಮಹಾಲೆ, ಸಾಂಬ್ರಾಣಿ
*ಭಾರತದಲ್ಲಿ ಭ್ರಷ್ಟಾಸುರರ ವಧೆ ಯಾವಾಗ?*
ಈ ಪ್ರಶ್ನೆಯನ್ನು ಬ್ರಹ್ಮನ ಮುಂದಿಟ್ಟೆ, ಬ್ರಹ್ಮನೇ ನನ್ನ ಲೈಫ್‌ಟೈಮಲ್ಲಿ ಸಾಧ್ಯವಿಲ್ಲ ಎಂದು ಅಳುತ್ತಾ ಎದ್ದುಹೋದ!

ಆರಿಫ್, ದಾವಣಗೆರೆ
*ಪ್ರೀತಿಗೆ ಸ್ಫೂರ್ತಿ ಯಾವುದು?*
ಕೆಲವರಿಗೆ ನೋಟ, ಕೆಲವರಿಗೆ ನೋಟು!

ಆಶಾರಾಣಿ ಎಂ. ಮೇತ್ರೆ, ಬೀದರ್
*ನಾಲಿಗೆಯು ಕೆಟ್ಟ ಮಾತನಾಡಿದರೆ ಕಪಾಳ ಏಕೆ ಪೆಟ್ಟು ತಿನ್ನಬೇಕು?*



ಒಳಗೆಲ್ಲೋ ಷಾರ್ಟ್ ಆದ್ರೆ ಮೀಟರ್‌ಬಾಕ್ಸ್ ಢಂ ಅನ್ನಲ್ವೇ.. ಇದೂ ಹಾಗೆಯೇ!

ಕುಮಾರ ಚಲವಾದಿ, ಹೊಳೆನರಸಿಪುರ
*ತಂದೆಯಾದವನು ಮಕ್ಕಳಿಗೆ ಆಸ್ತಿ, ಮನೆ ಮಾಡಲೇಬೇಕೆ?*
ಹಾಗೇನಿಲ್ಲ, ಮಂತ್ರಿಯನ್ನಾಗಿ ಮಾಡಿದರೆ ಸಾಕು ಎಂದರಂತೆ ಎಡ್ಡಿ, ಸೋನಿಯಾ, ಗೌಡ್ರು.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಸುಂದರಿಯರನ್ನು ಮಿನುಗು ತಾರೆ ಅಂತಾರಲ್ಲ, ಯಾಕೆ?*
ಏಕೆಂದರೆ ಅವರು ಮೇಕಪ್ಪಿಲ್ಲದೆಯೂ ಮಿನುಗುತಾರೆ!

ಕವಿತ ಶಂಕರ್, ಶಿವಮೊಗ್ಗ
*ತಾಜ್‌ಮಹಲ್ ಪ್ರೀತಿಯ ಸಂಕೇತ. ವಿಧಾನಸೌಧ?*
ಆರಂಭಕ್ಕೆ ಮೌಲ್ಯಭರಿತ ಮಹಲ್, ಈಗ ಅದೇ ಮೌಲ್ಯಗಳ ಗೋರಿ.

ಎಚ್.ಆರ್. ದೇಸಾಯಿ, ರಾಯಚೂರು
*ಭಗವಂತನಿಗೆ ಅಂಜಿ ಬದುಕುವುದಕ್ಕೂ, ಭಯೋತ್ಪಾದಕನಿಗೆ ಅಂಜಿ ಬದುಕುವುದಕ್ಕೂ ಏನು ವ್ಯತ್ಯಾಸ?*
ದಿನ ಕಳೆದಂತೆ ಒಂದರಿಂದ ಅಭಯ ಹೆಚ್ಚುತ್ತದೆ, ಇನ್ನೊಂದರಿಂದ ಭಯ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ವಾರಾಂಗನೆಯರಿಗಿರುವ ತತ್ವ, ಆದರ್ಶಗಳು ಈ ರಾಜಕಾರಣಿಗಳಿಗಿರುವುದಿಲ್ಲವಲ್ಲ...?*
ನೀವೂ ಸರಿಯೇ; ದೇಹ ಮಾರುವವರಿಗೆ ಇರುವ ತತ್ವಾದರ್ಶಗಳನ್ನು ಹೊಂದಿದರೆ ದೇಶ ಮಾರಲಾದೀತೇ?

ಆರ್. ಮಧುಸೂದನ್, ಹಾಸನ
*ನಗುನಗುತ್ತಾ ಮದುವೆ ಆಗ್ತಾರೆ, ಆದರೆ ಡೈವೋರ್ಸ್ ಕೊಡುವಾಗ ಕಚ್ಚಾಡ್ತಾರಲ್ಲಾ, ಏಕೆ?*
ಸರಿಯೇ. ಡೈವೋರ್ಸ್ ಮಹಲ್‌ಗೆ ಕಚ್ಚಾಟವೇ ಫೌಂಡೇಷನ್ನು!

ಪಿ.ಜೆ. ರಾಘವೇಂದ್ರ, ಮೈಸೂರು
*ಮಂತ್ರಿಯೊಬ್ಬರು ತಮ್ಮ ಮನೆಗೆ ವಿಪರ್ಯಾಸ ಎಂದು ಹೆಸರಿಟ್ಟಿದ್ದಾರಲ್ಲಾ...?*
ವಿ – ವಿದೇಶದ ಹಣ; ಪರ್ – ಪರಿಹಾರಕ್ಕೆಂದು ಸಂಗ್ರಹಿಸಿದ ಹಣ; ಯಾ ಯಾಚಿಸಿ ಪಡೆದ ಹಣ; ಸ– ಸಮ್ಮತಿಸಲು ಪಡೆದ ಹಣ; ಇವೆಲ್ಲವುಗಳಿಂದ ಕಟ್ಟಿದ ಮನೆಯಂತೆ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಗಂಗಾಸ್ನಾನ, ತುಂಗಾ ಪಾನ; ಕಾವೇರಿ...?*
ಜಯಲಲಿತೆಯೊಂದಿಗೆ ಯುಗಳ ಗಾನ!

ಹೆಚ್.ಸಿ. ಭಾಗ್ಯಕುಮಾರ್, ಬೆಂಗಳೂರು
*ಈಗೆಲ್ಲಾ ವಸ್ತು-ಸ್ಥಿತಿಗಿಂತ ವಾಸ್ತು-ಸ್ಥಿತಿಯ ಬಗ್ಗೆ ಜನರು ತಲೆ ಕೆಡಿಸಿಕೊಳ್ಳುತ್ತಿದ್ದಾರಲ್ಲಾ...?*
ಭಯದ ಮೂಲ ಎಲ್ಲೆಲ್ಲಿರತ್ತೋ ಅಲ್ಲೆಲ್ಲಾ ಮೂಢನಂಬಿಕೆಯ ತೋಳ ಇದ್ದೇ ಇರತ್ತೆ!

## ಬಹುಮಾನಿತ ಪ್ರಶ್ನೆ

ಕಾಡನೂರು ರಾಮಶೇಷ, ಹುಲಿಮಂಗಲ
*ಬೆಲೆಯೇರಿಕೆ ಬಾಂಬ್‌ನಿಂದ ತಪ್ಪಿಸಿಕೊಳ್ಳಲು ಸರಳ, ಸುಲಭ ಉಪಾಯ ಹೇಳ್ತೀರಾ ಸಾರ್?*
ಮಠ/ಜೈಲು/ಹುಚ್ಚಾಸ್ಪತ್ರೆ/ವಿಧಾನಸೌಧ ಸೇರಿಬಿಡಿ. ಎಲ್ಲವೂ ಸರ್ಕಾರದ ಖರ್ಚಿನಲ್ಲೇ ಆಗಿಬಿಡುತ್ತದೆ.

ನೊಂದವರು, ನೊಂದೂರು
*ಮದುವೆಯಾಗುವೆನೆಂದು ಹೇಳಿ ಕೊನೆ ಗಳಿಗೆಯಲ್ಲಿ ಕೈ ಕೊಟ್ಟ ಹುಡುಗಿಯ ಬಗ್ಗೆ ತಮ್ಮ ಅಭಿಪ್ರಾಯವೇನು? ತಮಾಷೆ ಉತ್ತರ ಬೇಡ.*
ಮದುವೆಯ ನಂತರ ಕೈಕೊಟ್ಟಿದ್ದರೆ ಮತ್ತೂ ಪ್ರಮಾದವಾಗುತ್ತಿತ್ತಲ್ಲಾ... ನಿರಾಶರಾಗಬೇಡಿ. ಹೋದದ್ದು ಹುಣ್ಣು, ಬರುವುದು ಹುಣ್ಣಿಮೆ ಎಂದುಕೊಳ್ಳಿ.

ನಾಗಭೂಷಣ ಮುತ್ತಾಗೊಂದಿ, ತುಮಕೂರು
*ರಾಮ್, ನೀವು ಹೆಂಡತಿಯನ್ನು ಕೇಳಿ ಹೇಳುತ್ತೇನೆ ಎಂದು ಉತ್ತರಿಸಿರುವುದರಿಂದ ನೀವು ಗಂಡು ಎಂದು ತಿಳಿಯಿತು. ಸರಿ ತಾನೆ?*
ಮೊನ್ನೆ ನಮ್ಮೆಜಮಾನ್ರೂ ನೀನು ಯಾವ ಗಂಡಿಗೂ ಕಡಿಮೆಯಿಲ್ಲ ಅಂತ ಹೇಳಿದ್ರು ಕಣ್ರಿ!

ಪರ್ವತ ಸಿ. ಪಾಟೀಲ, ಬಿಜಾಪುರ
*ಕತ್ತೆಗಳಿಗೆ ನಮ್ಮ ಭಾಷೆ ಕಲಿಸಿದರೆ ಏನಾಗುತ್ತದೆ?*



ಕಾಗದಗಳನ್ನು ತಿಂದಷ್ಟೇ ಅಲ್ಲ, ಓದಿಯೂ ಜೀರ್ಣಿಸಿಕೊಳ್ಳುತ್ತವೆ!

ಗೀತಾ ಬರ್ಲ, ಬೆಂಗಳೂರು
*ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು; ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ; ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ; ಎಲ್ಲರೊಳಗೊಂದಾಗು ಮಂಕುತಿಮ್ಮ ಎಂದರು ಡಿವಿಜಿ. ನೀವೇನಂತೀರಿ?*
ಅಂದಿಗೆ ಸರಿ. ಇಂದಿನ ಡ್ರಿಂಕ್ಸ್ ಯುಗದಲ್ಲಿ Fullಆಗು ಬೆಟ್ಟದಡಿ ಮನೆಗೆ ಮಲಗಿಯೆ ಹೋಗು; ಕಲ್ಲಾಗು ಸಾಲಿಗರು ಬಗೆಬಗೆಯಲುಗಿಯೆ; ಬೆಲ್ಲ ಸಕ್ಕರೆಯಾಗು ಬಾರು ವೈನ್ ಸ್ಟೋರ್‌ಗಳಿಗೆ; ಬಲು ಕುಡಿಯೆ ಬದುಕಿಹುದೆ? ಮಂಕುದಿಣ್ಣೆ !

■ ರಾಮ್